**ದಿನಾಂಕ: 10-03-2026ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ವಾಟೀ ಸವಾಲು: ವಾದಿಯರ ಪರ ಶ್ರೀ ಎ.ಡಿ. ವಕೀಲರಿಂದ**

1. ನನ್ನ ವಕೀಲರ ಹೆಸರು ಗೊತ್ತಿಲ್ಲ. ವಕೀಲರ ಮೂಲಕ ಈ ಕೇಸಿನಲ್ಲಿ ನೀವು ಜವಾಬು ಹಾಕಿಲ್ಲ ಎಂದರೆ ಹಾಕಿದ್ದೇನೆ ಎಂದು ಉತ್ತರಿಸುತ್ತಾರೆ. ನನ್ನ ತಂದೆ ತಾಯಿ ಜೀವಂತ ಇದ್ದಾರೆ ಅವರು ಹೊಲ ಮನೆ ಕೆಲಸ ಮಾಡುತ್ತಾರೆ. ನನ್ನ ತಂದೆ ತಾಯಿ ಹೆಸರಿನಲ್ಲಿ ಆಸ್ತಿ ಇರುತ್ತದೆ. ನಿಮ್ಮ ತಂದೆ ತಾಯಿಯರು ಹೊಲ ಮಾರಾಟ ಮಾಡಿದ್ದರ ಬಗ್ಗೆಯಾಗಲೀ ನಿಮ್ಮ ತಂದೆ ತಾಯಿ ಹೆಸರಿನಲ್ಲಿ ಹೊಲ ಇರುವ ಬಗ್ಗೆಯಾಗಲೀ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಹಾಜರುಮಾಡಿದ್ದೇನೆ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ಮಾರಾಟ ಮಾಡಿದಂತಹ ಹೊಲದ ಸರ್ವೆ ನಂಬರ್ ಏನು ಇದೆ ಎಂದರೆ ಸರ್ವೆ ನಂಬರ್ ಗೊತ್ತಿಲ್ಲ. ಸ.ನಂ.129/5 ರಲ್ಲಿ 3 ಎಕರೆ 31 ಗುಂಟಾ ಜಮೀನು ಖರೀದಿ ಮಾಡಲು ನಿಮ್ಮ ತಂದೆ ತಾಯಿಯರು ಹಣ ಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

2. ನಿಮ್ಮ ಗಂಡನಾದ 1ನೇ ಪ್ರತಿವಾದಿಯು ದಾವಾದ ಆಸ್ತಿ ಐಟಂ ನಂ.1 ನ್ನು 3ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಅದರ 20 ಲಕ್ಷ ಹಣವನ್ನು ವಾದಿಗೆ ಕೊಟ್ಟಿರುತ್ತೇವೆ. ದಾವಾ ಆಸ್ತಿ ಐಟಂ ನಂ.1ನ್ನು 1ನೇ ಪ್ರತಿವಾದಿಯು ಮಾರಾಟ ಮಾಡಿ ಅದರಿಂದ ಬಂದಂತಹ ಹಣದಿಂದ ಸ.ನಂ.129/5 ರಲ್ಲಿ 3 ಎಕರೆ 31 ಗುಂಟಾ ಜಮೀನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ವಾದಿಗೆ ಈ ಆಸ್ತಿಯಲ್ಲಿ ಭಾಗ ಹೋಗುತ್ತದೆ ಎಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ